

## ನಂಬಿಕೆಗೆ ದ್ರೋಹ ಆಗಲು ಎಷ್ಟೊಂದು 'ಸಹಜ' ರೀತಿಗಳಿವೆ?

ಡಾ.ವಿನೋದ ಛೆಬ್ಬಿ

# 35: ನಂಟಿನಲ್ಲಿ ನೋವು

ಕೆಲವು ವಾರಗಳಿಂದ ನಂಟಿನ ನಮೂನೆಗಳು, ಅದರಿಂದ ಕೂಡಿದ ವಿಧವಿಧದ ದಾಂಪತ್ಯ ಸಂಬಂಧಗಳ ಬಗೆಗೆ ತಿಳಿದುಕೊಂಡೆವು. ಈಗ ದಾಂಪತ್ಯದಲ್ಲಿ ಒಬ್ಬರ ವರ್ತನೆಯು ಇನ್ನೊಬ್ಬರ ನಂಬಿಕೆಯನ್ನು ಹೇಗೆ ಅಲ್ಲಾಡಿಸಿಬಿಡುತ್ತದೆ ಎಂದು ನೋಡೋಣ.

ಅಶೋಕ ತನ್ನ ಹೆಂಡತಿ ಆಶಾಳ ಜೊತೆ (ಇಲ್ಲಿ ಬರುವ ಪ್ರತಿಯೊಂದು ಹೆಸರೂ ಕಾಲ್ಪನಿಕ) ಸಲಹೆಗಾಗಿ ಬಂದಿದ್ದಾನೆ. ಸಮಸ್ಯೆ? ಇತ್ತೀಚೆಗೆ ಹೆಂಡತಿ ವಿನಾಕಾರಣ ಮಾತಿನ ಪ್ರಹಾರದಲ್ಲಿ ತೊಡಗುತ್ತಾಳಂತೆ. ಆಶಾ ಗಂಡನ ಸರಿಸಮ ದುಡಿಯುತ್ತಾಳೆ– ಅದು ಅವರ ಹೊಸ ಮನೆಯ ಸಾಲಕ್ಕೆ ಜಮಾ ಆಗುತ್ತದೆ. ಆದರೂ ಆಕೆಗೆ ಮನೆಗೆಲಸ ತಪ್ಪಿದ್ದಲ್ಲ. ಅತ್ತೆ ಸ್ವಲ್ಪ ಮಟ್ಟಿಗೆ ನೋಡಿಕೊಂಡರೂ ಸೊಸೆಯ ಸಹಾಯ ಬೇಕೇಬೇಕು. ಮೊನ್ನೆ ಹಬ್ಬದ ದಿನ ಅತ್ತೆಮಾವ ಊರಲ್ಲಿರಲಿಲ್ಲ. ಹಬ್ಬದ ಮರುದಿನ ಮರಳಿದರು. ಸೊಸೆಗೆ ಹಬ್ಬದ ದಿನ ದೇವರ ಪೂಜೆ ಮಾಡಿದ್ದೀಯಾ ಎಂದು ಅತ್ತೆ ಕೇಳಿದಳು. ಇಲ್ಲವೆಂದಾಗ ಇವಳನ್ನು ಆಕ್ಷೇಪಿಸಿದರು. ಆಗ ಆಶಾ, 'ನಿಮ್ಮ ಮಗನೇ ಪೂಜೆಯನ್ನು ನಂಬುವುದಿಲ್ಲವಲ್ಲ?' ಎಂದಾಗ ಅವರು, 'ಅಯ್ಯೋ, ಅವನು ಮೊದಲಿನಿಂದಲೂ ಹಟಮಾರಿ. ನನ್ನ ಮಾತು ಕೇಳುವುದಿಲ್ಲ. ನೀನಾದರೂ ಕೇಳಬಾರದೆ?' ಆಗ ಆಶಾ, 'ನಿಮ್ಮ ಮಗನೇ ನಿಮ್ಮ ಆಚರಣೆ ಅನುಸರಿಸದಿದ್ದರೆ ಸೊಸೆ ಅನುಸರಿಸಬೇಕೆಂದು ಹೇಗೆ ಅಪೇಕ್ಷಿಸುತ್ತೀರಿ?' ಎಂದು ಪ್ರಶ್ನಿಸಿ ಉದ್ದ ನಾಲಗೆಯವಳು ಎಂದು ಬಯ್ಯಿಸಿಕೊಂಡಳು. ಆಶಾ ಇದನ್ನು ಗಂಡನ ಮುಂದೆ ಹೇಳಿದಾಗ, ಅಶೋಕ, 'ದೊಡ್ಡವರು ಏನೋ ಅಂತಾರೆ. ಅದನ್ನು ಅಷ್ಟು ಸೀರಿಯಸ್ ಆಗಿ ತಗೋಬೇಡ.' ಎಂದು ಹೇಳಿ ಸುಮ್ಮನಾದ. ಇವಳಿಗೆ ಆಘಾತ. ಯಾಕೆ? ಅತ್ತೆಮಾವಂದಿರ ದ್ವಂದ್ವ ಧೋರಣೆಯಿಂದಲ್ಲ, ಗಂಡ ತನ್ನ ಪರವಾಗಿ ಒಂದು ಸಲವಾದರೂ ನಿಂತಿಲ್ಲ ಎನ್ನುವ ನೋವು. ಹಲವು ಸಲ ಹೀಗಾದ ನಂತರ ಆಕೆ ಗಂಡನನ್ನು ತೀವ್ರವಾಗಿ ಟೀಕಿಸಲು ಆರಂಭಿಸಿದ್ದಾಳೆ. ಪ್ರತಿ ಮಾತಿನ ಪೆಟ್ಟು ಮುಗಿಯುವುದು ಒಂದೇ ಸಾಲಿನಿಂದ: 'ನನ್ನ ಪರವಾಗಿ ಒಂದು ಸಲವಾದರೂ ನಿಂತಿದ್ದೀಯಾ? ನಾನೆಂದರೆ ನಿನಗೆ ಬೆಲೆಯಿದೆಯೆ?' ಅಶೋಕ ಉತ್ತರಿಸಲು ಹೋಗಿ ಇನ್ನಷ್ಟು ಟೀಕೆಗೆ ಒಳಗಾಗಿದ್ದಾನೆ.

ಕಲಾ ಹಾಗೂ ಕಲ್ಲೇಶ ಪ್ರೇಮಿಗಳು. ಕಲ್ಲೇಶನ ಯೋಜನೆಯಂತೆ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ. ಮುಂದೆ ಮದುವೆ ಆಗಲಿದ್ದಾರೆ. ಈ ನಡುವೆ ಕಲ್ಲೇಶ ತನ್ನ ತಮ್ಮನನ್ನು ಜೊತೆಗಿರಲು ಕರೆತಂದಿದ್ದಾನೆ. ಇತ್ತೀಚೆಗೆ ಕಲ್ಲೇಶ ಒಂದು ಪರೀಕ್ಷೆಗೆಂದು ಎರಡು ತಿಂಗಳು ರಜೆಹಾಕಿ ಅಧ್ಯಯನ ಶುರುಮಾಡಿದ್ದಾನೆ. ಅದರಲ್ಲಿ ಎಷ್ಟು ಮಗ್ನನಾಗಿದ್ದಾನೆ ಎಂದರೆ ಕಲಾಳ ಜೊತೆ ಮಾತನ್ನೇ ಪೂರ್ತಿ ನಿಲ್ಲಿಸಿದ್ದಾನೆ. ಸಾಕಾಗದ್ದಕ್ಕೆ ಸ್ನಾನದ ಸೌಲಭ್ಯ ಇರುವ ಕೋಣೆಯನ್ನು ಹಿಡಿದುಕೊಂಡಿದ್ದು ಅದರಲ್ಲಿ ಯಾರನ್ನೂ ಬರಿಸಿಕೊಟ್ಟಿಲ್ಲ. ಹಾಗಾಗಿ ಕಲಾ ಇನ್ನೊಂದು ಕೋಣೆಯಲ್ಲಿ ವಾಸವಾಗಿದ್ದು, ಉಳಿದೊಂದು ಸ್ನಾನದ ಕೋಣೆಯನ್ನು ಮೈದುನನಾಗಲಿರುವ ಗಂಡಿನೊಂದಿಗೆ ಹಂಚಿಕೊಳ್ಳಬೇಕಾಗಿದೆ. ಇದಕ್ಕಿಂತ ಮುಖ್ಯ ವಿಷಯ ಎಂದರೆ ಈ ವಿಚಾರ ಮಾತಾಡಬೇಕೆಂದರೆ ಕಲ್ಲೇಶ ಸಿಗುತ್ತಿಲ್ಲ. ಒಂದೇ ಮನೆಯಲ್ಲಿದ್ದರೂ ಕಣ್ಣಿಗೆ ಬೀಳದಂತೆ ವರ್ತಿಸುತ್ತಾನೆ. ಪರಿಣಾಮ? ಕಲಾ ಒಂಟಿತನದ ಚಿತ್ರಹಿಂಸೆಗೆ ಒಳಗಾಗಿದ್ದಾಳೆ. ಪರೀಕ್ಷೆ ಮುಗಿದ ಮಾರನೆಯ ದಿನವೇ ಕಲಾ ಮನೆಬಿಟ್ಟು ಹೊರಡುವ ನಿರ್ಧಾರ ಪ್ರಕಟಿಸಿದ್ದಾಳೆ. ಕಲ್ಲೇಶನಿಗೆ ಆಘಾತ. ಕಲಾಳಿಗೆ ಕೇಳಿದರೆ ಅವಳು ಹೇಳುವುದು ಒಂದೇ ಮಾತು: 'ನಿನಗೆ ನನ್ನ ಅಗತ್ಯವಿದೆಯೆ? ನಾನು ನಿನಗೆ ನಿಜವಾಗಲೂ ಬೇಕೆ?'

ಹಸನ್ ಹಾಗೂ ಹಸೀನಾ ವೃತ್ತಿಪರ ಕಾಲೇಜಿನಲ್ಲಿ ಓದುತ್ತಿದ್ದು, ಪರಸ್ಪರ ಪ್ರೀತಿಸುತ್ತಿದ್ದಾರೆ. ವೃತ್ತಿಪರ ಪ್ರವಾಸದ ಖರ್ಚಿಗಾಗಿ ಹಸೀನಾ ಹತ್ತುಸಾವಿರ ರೂಪಾಯಿಗಳನ್ನು ಹಸನ್‌ಗೆ ಕೊಟ್ಟು ತನ್ನ ಬ್ಯಾಂಕಿಗೆ ಜಮಾಮಾಡಲು ಹೇಳಿದ್ದಾಳೆ. ಮರುದಿನ ಎಲ್ಲರೂ ಗಾಡಿ ಹತ್ತಿ ಅಂತಾಕ್ಷರಿ ಹಾಡುತ್ತಿರುವಾಗ ಹಸೀನಾ ಹಸನ್‌ಗೆ ಜಮಾ ಮಾಡಿರುವ ಬಗೆಗೆ ವಿಚಾರಿಸಿದ್ದಾಳೆ. ಅವನು ಗಲಿಬಿಲಿಯಿಂದ, 'ಅಯ್ಯೋ, ಮರೆತೇಬಿಟ್ಟೆ!' ಎಂದಿದ್ದಾನೆ. ಅವಳು ದಿಗ್ಭ್ರಮೆಗೊಂಡು 'ಪರವಾಗಿಲ್ಲ, ಹಣ ವಾಪಸ್ ಕೊಡು, ಎಲ್ಲದಕ್ಕೂ ಕೈಯಿಂದಲೇ ಖರ್ಚು ಮಾಡುತ್ತೇನೆ.' ಎಂದಿದ್ದಾಳೆ. ಹಸನ್, 'ವೆರಿ ಸಾರಿ ಪ್ಯಾರಿ, ಹಣ ನನ್ನ ಮನೆಯಲ್ಲಿದೆ. ಇಲ್ಲಿಗೆ ತರಬೇಕೆಂದಿದ್ದೆ, ಮರೆತೇಬಿಟ್ಟೆ!' ಇವಳು ಗಾಬರಿಯಾದಾಗ ಅವನು, 'ಯೋಚಿಸಬೇಡ, ಪ್ರವಾಸದಿಂದ ಮರಳಿದ ದಿನವೇ ನಿನ್ನ ಮನೆ ಬಾಗಿಲಿಗೆ ಬಂದು ಹಣ ಮುಟ್ಟಿಸುತ್ತೇನೆ.' ಎಂದು ಭರವಸೆ ಕೊಟ್ಟು ಅಂತಾಕ್ಷರಿಯಲ್ಲಿ ಮಗ್ನನಾಗಿದ್ದಾನೆ. ಹದಿನೈದು ದಿನಗಳ ಪ್ರವಾಸದ ಉದ್ದಕ್ಕೂ ಹಸೀನಾ ಸಹಪಾಠಿಗಳಿಂದ ತಲಾ ನೂರು–ಇನ್ನೂರರಂತೆ ಅಕ್ಷರಶಃ ಭಿಕ್ಷೆಬೇಡಿದ್ದಾಳೆ. ಪ್ರವಾಸದ ನಂತರ ಹಸನ್‌ನಿಂದ ದೂರವಾಗಿದ್ದಾಳೆ. ಇವನು ದಿಗ್ಭ್ರಮೆಗೊಂಡು ಕಾರಣ ಕೇಳಿದಾಗ ಒಂದೇ ಮಾತಿನಲ್ಲಿ ಹೇಳಿದ್ದಾಳೆ: 'ನಾನು ನಿನ್ನ ಮೇಲೆ ಭರವಸೆ ಇಡಲು ಸಾಧ್ಯವಿಲ್ಲ.'

ಸುಚೇತಾ ತನ್ನನ್ನು ಮದುವೆಯಾಗಿ ವರ್ಷದೊಳಗೆ ದೂರವಾಗುತ್ತಿದ್ದಾಳೆ ಎಂದು ಸಾವನ್ ನನ್ನ ಹತ್ತಿರ ಕರೆದುಕೊಂಡು ಬಂದಿದ್ದಾನೆ. ಇದು ಶುರುವಾಗಿದ್ದು ಸಾವನ್ ತನ್ನ ಸಹೋದ್ಯೋಗಿ ತರುಣಿಗೆ ಹತ್ತಿರವಾದಾಗಿನಿಂದ. ಅವಳ ತೊಂದರೆಗಳನ್ನು ಕೇಳುತ್ತ ಮಧ್ಯರಾತ್ರಿಯ ತನಕ ಮಾತಾಡುತ್ತಿದ್ದನಂತೆ. ಸುಚೇತಾ ಆಕ್ಷೇಪಿಸಿದಾಗ ಅಲಕ್ಷ್ಯ ಮಾಡಿದ್ದಾನೆ. ಇದು ಹೆಚ್ಚಿದಾಗ ಸುಚೇತಾ ಬೇರೆಯಾಗಿ ಗೆಳತಿಯ ಮನೆಯಲ್ಲಿದ್ದಾಳೆ. ಅವಳು ಇವೊತ್ತಿಲ್ಲ ನಾಳೆ ಮರಳುತ್ತಾಳೆ ಎಂದುಕೊಂಡು ಸಾವನ್ ಸುಮ್ಮನಿದ್ದಾನೆ. ಎರಡು ತಿಂಗಳಲ್ಲೇ ಅವಳು ಬೇರೆ ಊರಲ್ಲಿ ಕೆಲಸ ಹುಡುಕಿಕೊಂಡು ಇವನನ್ನು ಬಿಟ್ಟಾಗ ತೀವ್ರ ಆಘಾತ. ಅವಳೊಂದಿಗೆ ಜಗಳವಾಡಿದ್ದಾನೆ. ತನಗೂ ಗೆಳತಿಗೂ ಯಾವ ಸಂಬಂಧವೂ ಇಲ್ಲವೆಂದು ಆಣೆಪ್ರಮಾಣ ಮಾಡಿದ್ದಾನೆ. ಆಗ ಸುಚೇತಾ ಒಂದೇ ಮಾತು ಹೇಳಿದ್ದಾಳೆ: 'ಸಾವನ್, ಅವಳ ಜೊತೆಗೆ ನೀನು ಮಲಗಿಲ್ಲ ಎಂದು ನನಗೂ ಗೊತ್ತು. ಅದಕ್ಕಾಗಿ ನಾನು ನಿನ್ನನ್ನು ಬಿಡುತ್ತಿಲ್ಲ. ಆಕೆಯೊಡನೆ ನೀನು ಮೂರು ತಿಂಗಳು ಮಾತಾಡಿದ್ದೂ ನನಗೆ ಸಮಸ್ಯೆ ಅಲ್ಲ. ಹಾಗೆ ನೋಡಿದರೆ ನಿನ್ನ ಗೆಳತಿ ನನಗೂ ಗೆಳತಿಯೆ. ಅವಳಿಗೆ ಸಹಾಯ ಮಾಡಲು ನನ್ನನ್ನೂ ನಿನ್ನೊಂದಿಗೆ ಸೇರಿಸಿಕೊಳ್ಳಬಹುದಾಗಿತ್ತು. ಅದುಬಿಟ್ಟು, ನನ್ನನ್ನು ನಿಮ್ಮಿಬ್ಬರ ಸಂಬಂಧದಿಂದ ದೂರವಿಟ್ಟೆ. ನಾನು ನಿಮ್ಮಿಬ್ಬರ ಹತ್ತಿರವಾಗಲು, ಅದರ ಮೂಲಕ ನಿನ್ನನ್ನು ಅರ್ಥಮಾಡಿಕೊಳ್ಳಲು ಬಂದರೂ ನನ್ನನ್ನು ಅಲಕ್ಷಿಸಿ, ನಿಮ್ಮಿಬ್ಬರ ಸಂಬಂಧದಲ್ಲಿ ನಾನು ಅಡ್ಡಿಯಾಗಿದ್ದೇನೆ ಅನ್ನುವ ಭಾವ ತೋರಿಸಿದೆ. ನೆನಪಿದೆಯೆ? ನಾನು ಅತ್ತೂ ಅತ್ತೂ ಮುಖ ತಿರುಗಿಸಿಕೊಂಡು ಮಲಗುತ್ತಿದ್ದಾಗ ನೀನು ಅವಳೊಡನೆ ಮಾತು ಮುಗಿಸಿ, ನನ್ನನ್ನು ಇದ್ದೀಯಾ ಸತ್ತೀಯಾ ಅಂತ ಕೇಳದೆ ಇನ್ನೊಂದು ಕಡೆ ಮುಖ ತಿರುಗಿಸಿಕೊಂಡು ಮಲಗಿದ್ದು ಎಷ್ಟು ಸರ್ತಿಯೋ. ಪ್ರತಿಸಲವೂ ನನಗೆಷ್ಟು ಆಘಾತ ಮಾಡಿದ್ದೀಯಾ ಎಂದು ನಿನಗೇ ಗೊತ್ತಿಲ್ಲ. ಪ್ರಶ್ನೆ ಏನೆಂದರೆ, ನನ್ನನ್ನು ಪ್ರೀತಿಸುತ್ತೀಯಾ ಸರಿ, ಆದರೆ ನನ್ನ ಭಾವನೆಗಳಿಗೆ, ನನ್ನ ಅನಿಸಿಕೆಗಳಿಗೆ ಸ್ಪಂದಿಸಿದ್ದೀಯಾ?'

ಇಲ್ಲೇನು ನಡೆಯುತ್ತಿದೆ? ಇಷ್ಟು ಹತ್ತಿರವಾಗಿ, ಬದ್ಧಸಂಬಂಧಕ್ಕೆ ಒಪ್ಪಿಕೊಂಡವರು ಒಂದೇ ಒಂದು ಘಟನೆಯಿಂದ ಸಿಡಿದು ದೂರವಾಗುವ ಪ್ರಕ್ರಿಯೆಯನ್ನು ಗಮನಿಸಿದಾಗ ಕಾರಣ ಸ್ಪಷ್ಟವಾಗಿದೆ: ನಂಬಿಕೆಗೆ ದ್ರೋಹ. ಒಬ್ಬರು ಸಂಗಾತಿಯನ್ನು ಪೂರ್ತಿ ನಂಬಿರುವಾಗ ಇನ್ನೊಬ್ಬರು ಅದನ್ನು ಅರ್ಥಮಾಡಿಕೊಳ್ಳದೆ 'ನಡೆಯುತ್ತದೆ' ಎಂದು ತನ್ನಿಷ್ಟ ಬಂದಂತೆ ವರ್ತಿಸಿದ್ದಾರೆ. ತನ್ನ ವರ್ತನೆಯು ಸಂಗಾತಿಯ ಮನಸ್ಸಿನಮೇಲೆ ಎಷ್ಟೊಂದು ಆಘಾತಕರ ಪರಿಣಾಮ ಬೀರುತ್ತಿದೆ ಎಂದು ಯಾರೂ ಯೋಚಿಸಲು ಹೋಗಿಲ್ಲ.

ಭದ್ರ ಸಂಬಂಧದಲ್ಲಿ ಬಿರುಕು ಹೇಗೆ ಬಿಡುತ್ತದೆ ಎಂದು ಗೊತ್ತಾಯಿತಲ್ಲ? ನಂಬಿಕೆಯ ಬಗೆಗೆ ಹೆಚ್ಚಿನ ಅಧ್ಯಯನವನ್ನು ಮುಂದಿನ ಸಲ ಮಾಡೋಣ.

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.

ಲೇಖಕರ ವಿಳಾಸ: www.medisex.org